# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸೇಡಂ.

## ಸಿ. ಸಿ. ನಂ.1223/2022

| | | | |
|---|---|---|---|
| ಹೆಸರು ಶ್ರೀ/ಶ್ರೀಮತಿ | ಸಣ್ಣ ಮಹೇಶ | ಸಿಡಬ್ಲ್ಯೂ-9 | ಪಿಡಬ್ಲ್ಯೂ-7 |
| ತಂದೆಯ/ಗಂಡನ ಹೆಸರು | ಮಾಣಿಕಪ್ಪ | | |
| ವಯಸ್ಸು | 30 ವರ್ಷ | | |
| ಉದ್ಯೋಗ | ಆರಕ್ಷಕರು, ಮಳಖೇಡ ಪೊಲೀಸ್ ಠಾಣೆ | | |
| ವಾಸ ಸ್ಥಳ | ಮಳಖೇಡ | | |

ದಿನಾಂಕ 27-03-2024

ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರವರಿಂದ**

ನಾನು 2021 ರಿಂದ ಮಳಖೇಡ ಪೊಲೀಸ್ ಠಾಣೆಯಲ್ಲಿ ಆರಕ್ಷಕ ಅಂತಾ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ದಿನಾಂಕ 11.10.2024 ರಂದು ಸಾಯಂಕಾಲ 05.30 ಗಂಟೆಗೆ ನಾನು ಕರ್ತವ್ಯದಲ್ಲಿ ಇರುವಾಗ ಆಹಾರ ನಿರೀಕ್ಷಕರು ಠಾಣೆಗೆ ಹಾಜರಾಗಿ ನನಗೆ ಮತ್ತು ಎ.ಎಸ್.ಐ ಸಾಹೇಬರು, ಪಿಸಿ-929, 595 ಹಾಗೂ ಪಂಚರಾದ ಶ್ರೀ ತಿಮ್ಮಯ್ಯ ಮತ್ತು ಅನಿಲ ಇವರು ನಮಗೆ ಈಗ 05.00 ಗಂಟೆ ಸುಮಾರಿಗೆ ಯಾದಗಿರಿ ಜಿಲ್ಲೆಯ ಗುರುಮಿಠಕಲಕಡೆಯಿಂದ ಕಲಬುರಗಿಕಡೆಗೆ ಎರಡು ಲಾರಿಗಳಲ್ಲಿ ಅನಧಿಕೃತವಾಗಿ ಪಡಿತರ ಚೀಟಿಗೆ ವಿತರಣೆ ಮಾಡುವ ಅಕ್ಕಿಯನ್ನು ಕಾಳಸಂತೆಯಲ್ಲಿ ಮಾರಾಟ ಮಾಡುವ ಕುರಿತು ಸಾಗಾಣಿಕೆ ಮಾಡುತ್ತಿದ್ದಾರೆ ಎಂಬುದಾಗಿ ಖಚಿತ ಬಾತ್ಮಿ ಬಂದಿದ್ದು ದಾಳಿಯಲ್ಲಿ ಪಾಲ್ಗೊಳುವಂತೆ ಕೇಳಿಕೊಂಡಿರುತ್ತಾರೆ. ಆಗ ನಾವೆಲ್ಲರೂ ಸಾಯಂಕಾಲ 06.00 ಗಂಟೆಗೆ ಠಾಣೆಯಿಂದ ಹೊರಟು ನೀಲಹಳ್ಳಿ ಗ್ರಾಮದ ಕಲಬುರಗಿ ಸೇಡಂ ರಸ್ತೆಯ ಪಕ್ಕದಲ್ಲಿ ನಿಂತು ವಾಚ್ ಮಾಡಿದ್ದು ಆಗ 07.30.ಗಂಟೆಗೆ ಎರಡು ಲಾರಿಗಳು ಬಂದಿದ್ದು ಅವುಗಳನ್ನು ನಿಲ್ಲಿಸುವಂತೆ ಸೂಚಿಸಿದ ತಕ್ಷಣ ಅವು ನಿಂತಿದ್ದು ಅದರ ಚಾಲಕರು ಲಾರಿಯನ್ನು ಬಿಟ್ಟು ಓಡಿ ಹೋಗಿರುತ್ತಾರೆ. ಲಾರಿಯ ನಂಬರ ನೋಡಿದ್ದು ಅದರ ನಂಬರ ಜಿಜೆ-36 ವ್ವಿ-0723 ಅಂತಾ ಇದ್ದು ಅದರಲ್ಲಿ 50 ಕೆಜಿ ತೂಕದ 624 ಚೀಲ ಪಡಿತರ ಅಕ್ಕಿಗಳು ಇದ್ದವು. ಆಗ ಪಂಚರ ಸಮಕ್ಷಮ 1 ಚೀಲದಿಂದ 1 ಕೆಜಿಯಷ್ಟು 3 ಬ್ಯಾಗಳಲ್ಲಿ 3 ಕೆಜಿಯಷ್ಟು ಅಕ್ಕಿಯನ್ನು ಎಫ್.ಎಸ್.ಎಲ್. ವರದಿಯ ಕುರಿತು ತೆಗೆದಿರುತ್ತೇವೆ. ಇನ್ನೊಂದು ಲಾರಿ ಅದರ ಸಂ. ಜಿಜೆ-36 ಟಿ-4732 ಅಂತಾ ಇತ್ತು ಅದರಲ್ಲಿ 50 ಕೆಜಿ ತೂಕದ 624 ಚೀಲ ಪಡಿತರ ಅಕ್ಕಿ ಇತ್ತು. ಆಗ ಸದರಿ ವಾಹನದಿಂದ 3 ಕೆಜಿ ಅಕ್ಕಿಯನ್ನು ಶಾಂಪಲ ಸಲುವಾಗಿ ಪಡೆದುಕೊಂಡು ಪಂಚರ ಸಹಿವುಳ್ಳ ಚೀಟಿ

ಅಂಟಿಸಿದ್ದು ಇರುತ್ತದೆ. ನಂತರ ಸ್ಥಳದಲ್ಲಿ 07.30 ರಿಂದ 09.00 ಗಂಟೆಯವರೆಗೆ ಪಂಚನಾಮೆಯನ್ನು ಬರೆದು ನಂತರ ಜಪ್ತುಪಡಿಸಿಕೊಂಡ 6 ಕೆಜಿ ಅಕ್ಕಿಯನ್ನು ನಮ್ಮ ಸಾಹೇಬರು ತಮ್ಮ ತಾಬಾಕ್ಕೆ ಪಡೆದುಕೊಂಡಿರುತ್ತಾರೆ. ಲಾರಿಗಳನ್ನು ತೆಗೆದುಕೊಂಡು ಪೊಲೀಸ್ ಠಾಣೆಗೆ ಬಂದಿರುತ್ತೇವೆ. ಘಟನೆಯ ಕುರಿತು ತನಿಖಾಧಿಕಾರಿಯವರ ಮುಂದೆ ಹೇಳಿಕೆ ನೀಡಿರುತ್ತೇನೆ. ಲಾರಿಗಳನ್ನು ನೋಡಿದ್ದಲ್ಲಿ ಗುರುತಿಸುತ್ತೇನೆ. ನ್ಯಾಯಾಲಯದ ಮುಂದಿರುವ ಮು.ಮಾ.ಗಳನ್ನು ಗುರುತಿಸುತ್ತೇನೆ.

**ಪಾಟೀ ಸವಾಲುಃ ಶ್ರೀ ಬಿ. ಎಸ್. ಡಿ. ಆರೋಪಿತರ ಪರ ವಕೀಲರಿಂದ**

ನಾನು ರೇಡಗೆಂದು ಹೋಗಿರುವುದಾಗಿ ಹೇಳಿದ್ದು ನೀಲಹಳ್ಳಿ ಬಸ್ ನಿಲ್ದಾಣದ ಹತ್ತಿರ ಸಾರ್ವಜನಿಕರು ಯಾರು ಸೇರಿದ್ದರು ಎಂದು ಹೇಳಲು ಬರುವುದಿಲ್ಲ. ನಮ್ಮ ಸಾಹೇಬರು ನೀಲಹಳ್ಳಿ ಗ್ರಾಮದ ಜನರ ಹೇಳಿಕೆಗಳನ್ನು ಪಡೆದುಕೊಂಡಿಲ್ಲ. ಆ ದಿವಸ ನಾನು ಮತ್ತು ಚಾಸಾ-1, ಪಂಚರಾದ ಚಾಸಾ-2 ಮತ್ತು 3, ಸಿಬ್ಬಂದಿಯವರಾದ ಚಾಸಾ-7, 8, 10 ಇವರು ಕೂಡಿ ಘಟನಾ ಸ್ಥಳಕ್ಕೆ ಹೋಗಿರುವುದಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆಗ ಎರಡು ಲಾರಿಗಳನ್ನು ತಡೆಹಿಡಿದಿರುವುದಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಲಾರಿಗಳಲ್ಲಿ ಕಾಳಸಂತೆಯ ಪಡಿತರ ಅಕ್ಕಿ ಇತ್ತು ಎಂಬುವುದಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ದಿವಸ ಪಂಚರ ಸಮಕ್ಷಮ ಪ್ರತಿ ಲಾರಿಯಿಂದ 3 ಕೆಜಿ ಪಡಿತರ ಅಕ್ಕಿಯನ್ನು ಶಾಂಪಲ ಸಲುವಾಗಿ ತೆಗೆದಿರುವುದಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಆ ದಿವಸ ಘಟನಾ ಸ್ಥಳಕ್ಕೆ ಹೋಗಿಲ್ಲ ಎಂದರೆ ಸರಿಯಲ್ಲ. ನಾನು ನನ್ನ ಮೇಲಾಧಿಕಾರಿಯವರ ಮಾತುಕೇಳಿ ಆರೋಪಿತರ ವಿರುದ್ಧ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ.

ಸಹಿ/-

ಪ್ರ. ದ. ನ್ಯಾ ದಂ. ಸೇಡಂ.

*SYH